# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 149 (248)
ಸದಸ್ಯರ ಹೆಸರು : ಶ್ರೀ ಮಧು ಜಿ, ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 10.12.2024
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು.

| ಕ್ರ.ಸಂ. | ವಿಷಯ | ಉತ್ತರ |
|---|---|---|
| ಅ) | ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಮಂಡ್ಯ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಸೇರಿದಂತೆ ಇನ್ನಿತರೆ ಇಲಾಖೆ / ಮಂಡಳಿ / ಸಂಸ್ಥೆಗಳು ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿರುವ ಯಾವ ಯಾವ ಬಡಾವಣೆಗಳು ಇನ್ನೂ ಮಂಡ್ಯ ನಗರಸಭೆಗೆ ಹಸ್ತಾಂತರವಾಗಿರುವುದಿಲ್ಲ; | ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿರವರು ರಚಿಸಿರುವ ಹಾಲಹಳ್ಳಿ ಸ್ಲಂ ಬಡಾವಣೆ ಹಾಗೂ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಿರುವಂತಹ ಸಾಹುಕಾರ್ ಚನ್ನಯ್ಯ ಬಡಾವಣೆ ಮತ್ತು ವಿವೇಕಾನಂದ ಬಡಾವಣೆಗಳು ಮಂಡ್ಯ ನಗರಸಭೆಗೆ ಹಸ್ತಾಂತರವಾಗಿರುವುದಿಲ್ಲ. |
| ಆ) | ಮಂಡ್ಯ ನಗರಸಭೆ ಅಂತಹ ಬಡಾವಣೆಗಳನ್ನು ಹಸ್ತಾಂತರ ಮಾಡಿಕೊಳ್ಳದಿರುವುದಕ್ಕೆ ಕಾರಣಗಳೇನು; ಅಲ್ಲಿ ಆಗಬೇಕಿರುವ ಅಭಿವೃದ್ಧಿ ಕಾಮಗಾರಿಗಳಾವುವು: (ಬಡಾವಣೆವಾರು ಮಾಹಿತಿ ನೀಡುವುದು) | ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ ಮತ್ತು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಇನ್ನಿತರೆ ಇಲಾಖೆ / ಮಂಡಳಿ / ಸಂಸ್ಥೆಗಳು ರಚಿಸಲ್ಪಟ್ಟಿರುವ ಬಡಾವಣೆಗಳನ್ನು ನಗರಸಭೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಸದರಿ ಬಡಾವಣೆಗಳಲ್ಲಿ ಸಂಪೂರ್ಣ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಬೀದಿ ದೀಪ, ಉದ್ಯಾನವನ ಕುಡಿಯುವ ನೀರಿನ ವ್ಯವಸ್ಥೆ ಇನ್ನಿತರೆ ಮೂಲ ಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ (ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗದಂತಹ) ನಿಯಮಾನುಸಾರ ನಗರಸಭೆಗೆ ಹಸ್ತಾಂತರಿಸಲು ಕ್ರಮವಹಿಸಿದ್ದಲ್ಲಿ ನಿಯಮಾನುಸಾರ ಹಸ್ತಾಂತರಿಸಿಕೊಳ್ಳಲು ಕ್ರಮವಹಿಸಲಾಗುವುದು. |
| ಇ) | ಮಂಡ್ಯ ನಗರದ ನಗರಸಭೆ ವ್ಯಾಪ್ತಿಗೆ ಸೇರಿದ ಹಲವು ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದೇ ಇರುವುದರಿಂದ ನಾಗರೀಕರಿಗೆ ತೀವ್ರ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಗರಸಭೆಯ ಗಮನಕ್ಕೆ ಬಂದಿರುತ್ತದೆ. ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಗಳನ್ನು ಬಹಳ ವರ್ಷಗಳ ಹಿಂದೆ ಅನುಷ್ಠಾನಗೊಳಿಸಿದ್ದು, ಒಳಚರಂಡಿಯ ಬಹಳಷ್ಟು ದುರಸ್ಥಿ ಕಾರ್ಯಗಳು ಬರುತ್ತಿರುತ್ತವೆ. ಇವುಗಳನ್ನು ನಗರಸಭಾ ವತಿಯಿಂದ ದುರಸ್ಥಿಗೊಳಿಸಲಾಗುತ್ತಿದೆ. |

....2,

| | | |
|---|---|---|
| ಈ) | ಬಂದಿದ್ದಲ್ಲಿ, ಯಾವ ಯಾವ ಬಡಾವಣೆಗಳಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ; ಇದನ್ನು ಸರಿಪಡಿಸಲು ಮಂಡ್ಯ ನಗರಸಭೆ ತೆಗೆದುಕೊಂಡಿರುವ ಕ್ರಮಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಮಂಡ್ಯ ನಗರದ ಹೊನ್ನಯ್ಯ ಬಡಾವಣೆಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆಯಿರುವುದಿಲ್ಲ ಹಾಗೂ ಯಾವುದೇ ಹಾಲಿಯಿರುವಂತಹ ವ್ಯವಸ್ಥೆಯಲ್ಲಿ ಯಾವುದೇ ದೂರು ಬರದ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಮತ್ತು ಈ ಕಾಮಗಾರಿ ಮತ್ತು ನಗರದಲ್ಲಿನ ಹಲವು ಬಡಾಣೆಗಳಲ್ಲಿ ಒಳಚರಂಡಿಯ ವ್ಯವಸ್ಥೆಯ ಕೊಳವೆಗಳನ್ನು ಒಳಪಡಿಸಲು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4ರ ಯೋಜನೆಯಡಿಯಲ್ಲಿ ರೂ. 541.00 ಲಕ್ಷಗಳ ಒಳಚರಂಡಿಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ (ಟೆಂಡರ್ ಕರೆಯಬೇಕಾಗಿರುತ್ತದೆ).<br><br>ಮಂಡ್ಯ ನಗರದ ಉದಯಗಿರಿ ಅಡ್ಡ ರಸ್ತೆಗಳು, ಸೋಮೇಶ್ವರ ಸಮುದಾಯ ಭವನದ ಹತ್ತಿರ ಬಿ.ಎಂ.ರಸ್ತೆ, ಹೊನ್ನಯ್ಯ ಬಡಾವಣೆ, ಹಾಲಹಳ್ಳಿ ಸ್ಲಂ ನಿಂದ ಚೀರನಹಳ್ಳಿ ರಸ್ತೆ, ಯತ್ತಗದಹಳ್ಳಿ ರಸ್ತೆಯಲ್ಲಿ ಮತ್ತು ಇಂದಿರಾ ಕಾಲೋನಿ ವೀರಗಲ್ಲಪ್ಪಸ್ವಾಮಿ ದೇವಸ್ಥಾನದ ಹತ್ತಿರ - ನಾಗಮಂಗಲ ರಸ್ತೆ - ಸಕ್ಕರೆ ಕಾರ್ಖಾನೆ ರಸ್ತೆಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. |
| ಉ) | ಮಂಡ್ಯ ನಗರದಲ್ಲಿ ಇರುವಂತಹ ಒಳಚರಂಡಿ ವ್ಯವಸ್ಥೆಯ ವಿವರವಾದ ನಕ್ಷೆ ತಯಾರಿಸುವ ಸಂಬಂಧ ಹಾಲಿ ಒಳಚರಂಡಿ ವ್ಯವಸ್ಥೆಯನ್ನು ಡಿಜಿಪಿಎಸ್ ಸಾಧನಗಳನ್ನು ಉಪಯೋಗಿಸಿಕೊಂಡು ಭೌಗೋಳಿಕ ಸರ್ವೆ ನಡೆಸಲು ನಗರಸಭೆ ಉದ್ದೇಶಿಸಿದೆಯೇ; | ನಗರಸಭೆಯ ವತಿಯಿಂದ ಉದ್ದೇಶಿಸಿರುವುದಿಲ್ಲ. |
| ಊ) | ಹಾಗಿದ್ದಲ್ಲಿ, ಯಾರ ಮುಖಾಂತರ ಸರ್ವೆ ನಡೆಸಲು ಉದ್ದೇಶಿಸಿದೆ: ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |

**ಸಂಖ್ಯೆ: ನಅಇ 63 ಎಲ್‌ಸಿಕ್ಯೂ 2024**

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು